

# ರೇಷ್ಮೆ ಸೀರೆಗಳ ಮೋಹಕ ಲೋಕ

ಮದುವೆಯಲ್ಲಿ ಮಂಗಳಕರ, ಶುಭದಾಯಕ ಎಂದೆಲ್ಲ ಭಾವಿಸುವ ಈ ರೇಷ್ಮೆ ಸೀರೆಗಳ ಲೋಕ ಬಹು ದೊಡ್ಡದು. ರೇಷ್ಮೆ ಉತ್ಪಾದನೆಯಲ್ಲಿ ಮುಂಚೂಣಿಯಲ್ಲಿರುವ ಭಾರತ ಉತ್ತಮ ಗುಣಮಟ್ಟದ ರೇಷ್ಮೆ ಬೆಳೆಯುತ್ತಿದೆ. ಪುಟ್ಟ ಹುಳುಗಳು ನೇಯುವ ಈ ಗೂಡನ್ನು ಸಂಸ್ಕರಿಸಿ ಅದರ ಎಳೆಗಳನ್ನು ತೆಗೆದು, ಬಣ್ಣ ಹಾಕಿ ಬಟ್ಟೆ ನೇಯುವ ಕಲೆ ನಿಜಕ್ಕೂ ಅದ್ಭುತ.

ಸೀರೆಗಳಲ್ಲಿ ಬಳಸುವ ಎಳೆಗಳ ಗುಣಮಟ್ಟ ಹಾಗೂ 'ಹಾಸು ಮತ್ತು ಹೊಕ್ಕು' ವೈಖರಿಯ ಮೇಲೆ ಈ ರೇಷ್ಮೆ ಸೀರೆಗಳ ಗುಣಮಟ್ಟವನ್ನೂ ಅಳೆಯಲಾಗುವುದು. ಭಾರತದಲ್ಲಿ ವಿವಿಧ ರೀತಿಯ ರೇಷ್ಮೆ ಸೀರೆಗಳಿದ್ದು, ಒಂದೊಂದು ಪ್ರದೇಶಕ್ಕೂ ಒಂದೊಂದು ಜನಪ್ರಿಯವಾಗಿದೆ.

ಕರ್ನಾಟಕದ ಮೈಸೂರು ರೇಷ್ಮೆ ಸೀರೆ ಅದರ ನಯವಾದ ಒಡಲು, ಗಾಢ ರಂಗಿಗೆ ಖ್ಯಾತಿ ಪಡೆದಿದೆ. ಅತ್ಯಂತ ಉತ್ತಮ ಮಟ್ಟದ ರೇಷ್ಮೆ ದಾರವನ್ನು ಇದಕ್ಕೆ ಬಳಸಲಾಗುವುದು. ಸಣ್ಣ ಜರಿಯಂಚಿನ ಯಾವುದೇ ಚಿತ್ತಾರವಿಲ್ಲದ ಸೀರೆ ಇಂದಿಗೂ ಜನಪ್ರಿಯ. ಈಗ ಲಕ್ಷಾಂತರ ರೂಪಾಯಿ ಬೆಲೆಬಾಳುವ ಸೀರೆಗಳು ಮಾರುಕಟ್ಟೆಗೆ ಕಾಲಿಟ್ಟಿದ್ದು, ಕಾರ್ಖಾನೆ ವಿವಿಧ ಪ್ರಯೋಗಗಳನ್ನು ಮಾಡಿ ಯಶಸ್ವಿಯಾಗಿದೆ.

ತಮಿಳುನಾಡಿನ ಕಂಚೀಪುರದ ಕಾಂಜೀವರಂ ಎಂದೇ ಪ್ರಸಿದ್ಧವಾಗಿರುವ ಈ ಚೆಂದದ ಸೀರೆ ಮದುವೆಗೆ ಹೇಳಿ ಮಾಡಿಸಿರುವಂತಹದ್ದು. ದಪ್ಪ ಜರಿ ಎಳೆಗಳಿರುವ ಅಂಚನ್ನು ಹೊಂದಿರುವ ಈ ಸೀರೆ ಕೊಂಚ ಭಾರ ಕೂಡ.

ಬನಾರಸ್ ಅಥವಾ ವಾರಾಣಸಿ ಉತ್ತರ ಪ್ರದೇಶದ ನಗರ. ಇಲ್ಲಿ

ಸಿನಿಮಾಗಳಿಂದಾಗಿ ಈಗ ದಕ್ಷಿಣ ಭಾರತದಲ್ಲೂ ಜನಪ್ರಿಯವಾಗಿದೆ. ಈ ಉಡುಪುಗಳ ವಿನ್ಯಾಸದಲ್ಲಿ ಹೆಚ್ಚು ಪ್ರಯೋಗಶೀಲತೆಯನ್ನೂ ಕಾಣಬಹುದು. ಲೇಸ್, ಕಸೂತಿ, ಮಣಿಗಳು, ಹರಳುಗಳು, ನಕ್ಕಿಗಳಲ್ಲದೇ ಪಾಶ್ಚಾತ್ಯ ವಿನ್ಯಾಸವನ್ನೂ ಸೇರಿಸುವ ಅವಕಾಶಗಳಿವೆ. ಕೆಂಪು, ಗುಲಾಬಿ, ಕೇಸರಿ ವರ್ಣದ ಲೆಹಂಗಾದ ಮೇಲೆ ಅರಿ, ಕುಂದನ್, ಝುರ್ದೋಸಿ, ಕನ್ನಡಿ ಕಸೂತಿಯನ್ನು ಹೆಚ್ಚಾಗಿ ಕಾಣಬಹುದು. ಇದಕ್ಕೆ ಬಳಸುವ ಬಟ್ಟೆಯಲ್ಲೂ ವೈವಿಧ್ಯವಿದೆ. ರೇಷ್ಮೆ, ಸ್ಯಾಟಿನ್, ಬ್ರೊಕೇಡ್, ಕ್ರೇಪ್, ಜಾರ್ಜೆಟ್ ಇತ್ಯಾದಿ.

ನೇರ ಕಟ್, ಫಿಶ್‌ಟೇಲ್ ಕಟ್, ಅಂಬ್ರೆಲ್ಲ ಕಟ್, ಫಾಗ್ರಾ ಕಟ್ ಮೊದಲಾದ ಶೈಲಿಯಲ್ಲಿ ವಿನ್ಯಾಸ ಮಾಡಿದ ಲೆಹಂಗಗಳಿಗೆ ದುಪಟ್ಟ ರೇಷ್ಮೆ, ಶಿಫಾನ್ ಬಟ್ಟೆಯಲ್ಲಿ ಅದ್ಭುತವಾಗಿ ಕಾಣುತ್ತದೆ.

## ವರನ ಉಡುಪು

ಸೀರೆ, ಲೆಹಂಗ ಎಂದೆಲ್ಲ ವಧು ಅಲಂಕರಿಸಿಕೊಂಡರೆ ಸರಿಸಮನಾಗಿ ವರ ಸಿದ್ಧನಾಗಬೇಡವೇ? ಆತನ ಧೋತಿ– ಶಲ್ಯ, ಕುರ್ತಾದಲ್ಲೂ ವೈವಿಧ್ಯಮಯ ವಿನ್ಯಾಸಗಳು ಬಂದಿವೆ. ಧೋತಿ ಉಡುವುದು ಕಷ್ಟಕರ, ನಿಭಾಯಿಸುವುದು ಕಠಿಣ ಎಂದಾದರೆ ಸಿದ್ಧಪಡಿಸಿದ ಧೋತಿ ಕೂಡಾ ಲಭ್ಯ. 'ಬ್ರೊಕೇಡ್ ರೇಷ್ಮೆಯಲ್ಲಿ ಸಿದ್ಧಪಡಿಸಿದ ಧೋತಿ 50– 60 ಸಾವಿರ ರೂಪಾಯಿವರೆಗೂ ಇದೆ' ಎನ್ನುತ್ತಾರೆ ಅಭಿಷೇಕ್.

ರೇಷ್ಮೆ ಕುರ್ತಾದ ಮೇಲೆ ಕಸೂತಿ ವೈವಿಧ್ಯಮಯ ವಿನ್ಯಾಸ ತಾಳಿದೆ. ತಿಳಿ ಹಳದಿ, ಬಿಳಿ ಬಣ್ಣದ ಕುರ್ತಾ ಬಿಟ್ಟು, ಕೆಂಪು, ನೀಲಿ, ನೇರಳೆ ವರ್ಣದ ಕುರ್ತಾಗಳ ಪ್ರಯೋಗ ಶುರುವಾಗಿದೆ. ಶಲ್ಯವೂ ಅಷ್ಟೇ, ವಧುವಿನ ಸೀರೆಗೆ ಮ್ಯಾಚಿಂಗ್ ಆಗುವಂತಿರುತ್ತದೆ.

## ಬಂಗಾರದ ಒಡವೆ ಬೇಕೆ?

ಭಾರತೀಯರಲ್ಲಿ ಮದುವೆ ಎಂದರೆ ಕಣ್ಣು ಕೋರೈಸುವ ಚಿನ್ನದ ಒಡವೆಗಳಿರದಿದ್ದರೆ ಹೇಗೆ? ಉದ್ಯೋಗಸ್ಥಳೋ ಅಥವಾ ಗೃಹಿಣಿಯೋ ನಿತ್ಯ

